ಕೊನೆಯಿರದ ಬಾನಲ್ಲಿ ಅಂತ್ಯವಿಲ್ಲದ ಹಾಡು

ಎಂ.ಡಿ. ಚಿತ್ತರಗಿ

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಮುದಗಲ್.

DOI: https://doi.org/10.5281/zenodo.16678074

ABSTRACT:

'ಒಂದು ಪಾತ್ರ ಹಲವು ಪಾತ್ರ-ಚಿತ್ರಣಗಳಿಗೆ ದೇಶ, ಭಾಷೆ, ಕಾಲದ ಗಡಿಯನ್ನು ಮೀರಿ ಜೀವ ತುಂಬುತ್ತಲೇ ಹೋಗುತ್ತದೆ' ಎಂಬ ಮಾತನ್ನು ಮಹಾಭಾರತದ ಕರ್ಣ ಮತ್ತೆ ಮತ್ತೆ ಸಾಕ್ಷೀಕರಿಸುತ್ತಲೇ ಹೋಗುತ್ತಾನೆ. ಕೆಲವು ಕಪ್ಪು ಚುಕ್ಕೆಗಳ ಮಧ್ಯೆಯೂ ಕೆಸರಲ್ಲರಳಿದ ಕುಸುಮದಂತೆ ಘಮಘಮಿಸುತ್ತಲೇ ಇರುವ ಪಾತ್ರವದು. ಹಲವು ಭಾರತೀಯ ಭಾಷೆಗಳಲ್ಲಿ ವೈವಿಧ್ಯಮಯವಾಗಿ ಹರಿದ ಕರ್ಣನ ಪಾತ್ರವು ಕನ್ನಡದಲ್ಲೂ ಹುಲುಸಾದ ಬೆಳೆಯನ್ನೇ ತಂದಿದೆ. ಈ ಸಾಲಿಗೆ ಜಗದೀಶ ಹಾದಿಮನಿಯವರ ನಾಟಕ ಕೃತಿಯು ಹೊಸದೊಂದು ಸೇರ್ಪಡೆ.

ಮಹಾಭಾರತದ ಕರ್ಣ ವರ್ತಮಾನದ ಬದುಕಿಗೆ, ಅಸ್ತವ್ಯಸ್ತತೆಗೆ, ರಾಜಕಾರಣಕ್ಕೆ ಎದುರಾಗುತ್ತಲೇ ಹೋಗುತ್ತಾನೆ. ಶ್ರೇಷ್ಠ ಕುಲದಲ್ಲಿ ಹುಟ್ಟಿಯೂ ಅನಾಥನಂತೆ ಕೆಳವರ್ಗದ ಪ್ರತಿನಿಧಿಯಾಗಿ ಬೆಳೆವ ಪರಿ, ವಿದ್ಯೆ ಕಲಿತರೂ ಶಾಪಕ್ಕೊಳಗಾಗುವ ಅಸಹಾಯಕತೆ, ವೀರಾಧಿವೀರನಾದರೂ ಹೆಜ್ಜೆಹೆಜ್ಜೆಗೂ ಅನುಭವಿಸುವ ಅವಮಾನ, ಅನ್ನದ ಋಣಕ್ಕೆ, ಮಾತಿಗೆ, ತಲೆಬಾಗಿ ಕ್ಷಯಿಸಿಹೋಗುವ ರೀತಿ ಹಾಗೂ ಆತನ ಉದಾತ್ತ ಗುಣಗಳ ವ್ಯಕ್ತಿತ್ವವು ಮತ್ತೆ ಮತ್ತೆ ಮುನ್ನೆಲೆಗೆ ತರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ನೂರೆಂಟು ಮಜಲುಗಳ ನಡುವೆಯೂ ಹೊಸ ತಲೆಮಾರಿನ ಬರಹಗಾರರನ್ನು ಈತನ ಪಾತ್ರ ಸೆಳೆಯುತ್ತಿದೆ ಎಂಬುದಕ್ಕೆ ಪ್ರಸ್ತುತ ನಾಟಕ ಸಾಕ್ಷಿಯಾಗುತ್ತದೆ.

ಜಗದೀಶ ಹಾದಿಮನಿಯವರು ಕರ್ಣನನ್ನು ವಿಭಿನ್ನ ನೋಟದಲ್ಲಿ ಓದುಗರ ಎದೆಗಿಳಿಸುತ್ತಾರೆ. ಹಲವು ಬದಲಾವಣೆ ಹಾಗೂ ಕೆಲವು ಹೊಸತನಗಳೊಂದಿಗೆ ವಿವೇಕ ಮತ್ತು ವೈಚಾರಿಕತೆಯ ರಾಜಮಾರ್ಗದಲ್ಲಿ ಕರ್ಣನನ್ನು ಹೊಸ ನೋಟದಲ್ಲಿ ಪರಿಚಯಿಸಿದ್ದಾರೆ. ಕಥಾನಾಯಕನ ನೆಪದಲ್ಲಿ ವರ್ತಮಾನದ ಕತ್ತಲಿಗೆ ಬೆಳಕಿಡುವ ನಾಟಕಕಾರರ ಪ್ರಯತ್ನ ವಿಶೇಷವೆನಿಸುತ್ತದೆ. ಇಲ್ಲಿ ಕಥಾನಾಯಕನನ್ನು ಕೇವಲ ಒಂದು ಪಾತ್ರವಾಗಿ ನೋಡದೆ ಗುಣ-ಸ್ವಭಾವಗಳ ದೃಷ್ಟಿಕೋನದಲ್ಲಿ ಒಬ್ಬ ಮನುಷ್ಯನನ್ನಾಗಿ ನೋಡಿ, ತಾವು ಕಂಡ ಬಗೆಯನ್ನು ಓದುಗ ವಲಯಕ್ಕೂ ತೆರೆದಿಡುತ್ತಾರೆ. ಕರ್ಣನಾದಿಯಾಗಿ ಉಳಿದೆಲ್ಲ ಪಾತ್ರಗಳನ್ನು ವಿವೇಕದ ಕಣ್ಣಿಂದಲೇ ನೋಡುವ ಲೇಖಕರ ಎಚ್ಚರಿಕೆಯ ನಡೆಯು ಸದ್ಯದ ಲೇಖಕರಿಗೆಲ್ಲ ಮಾದರಿ. ಪ್ರತೀ ಸನ್ನಿವೇಶವನ್ನು ವಾಸ್ತವದ ಕನ್ನಡಿಗೆ ಸೂಕ್ಷ್ಮವಾಗಿ ಬಿಂಬಿಸುವ ಹಾಗೂ ಹಲ-ಕೆಲವು ಪ್ರಶ್ನೆಗಳೊಂದಿಗೆ ಚಾವಟಿ ಬೀಸುವ ಲೇಖಕರ ಜಾಣ್ಮೆ ಮೆಚ್ಚುವಂಥದ್ದು. ಹಾಗೆ ಮೂಲಕ್ಕೆ ಬಾಧೆ ಬಾರದಂತೆ, ಅತಿಮಾನುಷತೆಗಳು

ಹೆಚ್ಚು ಇಣುಕದಂತೆ ತೀರಾ ಸಹಜವಾಗಿ ಹೆಣೆದ ಕಥಾನಕವಿದು. ಗದ್ಯಮಾದರಿಯಲ್ಲಿದ್ದರೂ ಪದ್ಯದ ಲಯವನ್ನೇ ಉಣಬಡಿಸುತ್ತಾ ಸಾಗುವ ಇಪ್ಪತ್ಮೂರು ದೃಶ್ಯಗಳು ಗೀತನಾಟಕದ ಮುದ ನೀಡುತ್ತವೆ. ಮುಖ್ಯವಾಗಿ ನಾಣ್ಣುಡಿ-ಜಾಣ್ಣುಡಿ, ಆಡುಭಾಷಾ ಸೊಗಸು, ರೂಪಕಗಳು ಹಾಗೂ ಪದಸಮೃದ್ಧಿಯ ಭಾಷಾಪ್ರೌಢಿಮೆಯೇ ಕೃತಿಯನ್ನು ಗೆಲ್ಲಿಸಿವೆ.

KEYWORDS:

ಕರ್ಣ, ದುರ್ಯೋಧನ, ಮಹಾಭಾರತ, ಜಗದೀಶ ಹಾದಿಮನಿ, ಅನ್ನದ ಋಣ.

ರಾಮಾಯಣ ಮಹಾಭಾರತದ ಕಾವ್ಯಗಳಲ್ಲಿನ ಪಾತ್ರ, ಚಿತ್ರಣ, ಸನ್ನಿವೇಶಗಳು ಕಾಲಕಾಲಕ್ಕೆ ನವನವೀನ ಬಣ್ಣಗಳೊಂದಿಗೆ ವರ್ತಮಾನಕ್ಕೆ ಎದುರಾಗುತ್ತಲೇ ಇವೆ. ಈ ನೆಲದ ಮಣ್ಣವಾಸನೆಯಂತೆ, ಎದೆಯೊಡಲಿನ ಭಾವತಂತಿಯಂತೆ ಬದುಕಿನೊಂದಿಗೆ ಸಮ್ಮಿಳಿತಗೊಂಡ ಅನೇಕ ಪಾತ್ರಗಳು ಬೇರೆ ಬೇರೆ ಕಣ್ಣೋಟಗಳಲ್ಲಿ ಬೆಳೆಯುತ್ತಲೇ ಇವೆ. ಮಹಾಭಾರತದ ಅನೇಕ ಪಾತ್ರಗಳಂತೂ ಬೇರೆ ಬೇರೆ ಭಾಷೆ ಹಾಗೂ ಸಾಹಿತ್ಯಿಕ ರೂಪಗಳಲ್ಲಿ ಅರಳಿ ನಿಂತಿವೆ. ಈ ಸಾಲಿನಲ್ಲಿ 'ಕರ್ಣ'ನನ್ನು ಕೇಂದ್ರವಾಗಿಟ್ಟುಕೊಂಡ ಜಗದೀಶ ಹಾದಿಮನಿಯವರ 'ಕೊನೆಯಿರದ ಬಾನು' ನಾಟಕ ಮತ್ತೊಂದು ಪ್ರಯೋಗಶೀಲತೆಗೆ ಸಾಕ್ಷಿಯೆನಿಸಿದೆ.

ಕರ್ಣ 'ಬೇವು-ಬೆಲ್ಲದ' ರಸಪಾಕ; ಎರಡು ತುಮುಲಗಳ ಚಿತ್ರಕಾವ್ಯ. ಒಂದೆಡೆ ಎಲ್ಲ ಇದ್ದೂ ಇಲ್ಲದವನಂತೆ, ಪರಿಸ್ಥಿತಿಯ, ಅಸಹಾಯಕತೆಯ ಗೊಂಬೆಯಂತೆ, ಮರುಕದ ಮೂರ್ತಿಯಾಗಿ, ದುರಂತನಾಯಕನಾಗಿ ಎದುರಾಗುತ್ತಾನೆ. ಇನ್ನೊಂದೆಡೆ ಕೌರವನ ಜೊತೆಗಾರನಾಗಿ, ಆತನ ದುರ್ವರ್ತನೆಗಳಿಗೆಲ್ಲ ಗೆಳೆತನದ ನೆರಳಾಗಿ ದುರುಳನಂತೆ ಕಾಣಿಸುತ್ತಾನೆ. ಈ ಇಬ್ಬಗೆಯ ನೋಟ ಹಾಗೂ ಪೂರ್ವಕಾವ್ಯಗಳ ಸ್ಪಷ್ಟ ಅರಿವಿನಲ್ಲೂ ನಾಟಕಕಾರರು ಕರ್ಣನನ್ನು ವಿಭಿನ್ನ ನೋಟದಲ್ಲಿ ಓದುಗರ ಎದೆಗಿಳಿಸುತ್ತಾರೆ. ಹಲವು ಬದಲಾವಣೆ ಹಾಗೂ ಕೆಲವು ಹೊಸತನಗಳೊಂದಿಗೆ ವಿವೇಕ ಮತ್ತು ವೈಚಾರಿಕತೆಯ ರಾಜಮಾರ್ಗದಲ್ಲಿ ಕರ್ಣನನ್ನು ಹೊಸ ನೋಟದಲ್ಲಿ ಪರಿಚಯಿಸಿದ್ದಾರೆ. ಕಥಾನಾಯಕನ ನೆಪದಲ್ಲಿ ವರ್ತಮಾನದ ಕತ್ತಲಿಗೆ ಬೆಳಕಿಡುವ ನಾಟಕಕಾರರ ಪ್ರಯತ್ನ ಅತ್ಯಗತ್ಯವೂ ಆಗಿದೆ.

ಕ್ರಿಯಾಶೀಲ ಬರಹಗಾರನು ತನ್ನ ಕಾಲದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಅಭಿಮುಖಿಗೊಳ್ಳುತ್ತಾ ತನ್ನ ನೋಟವನ್ನು ವಿಭಿನ್ನ ದಾರಿಗಳಲ್ಲಿ ವಿಸ್ತರಿಸಿಕೊಳ್ಳುತ್ತ ಸಾಗುತ್ತಾನೆ; ಜೊತೆಗೆ ದಾಖಲಿಸುತ್ತಾನೆ. ಪ್ರಸ್ತುತ ನಾಟಕಕಾರರು

ಕರ್ಣನ ಬದುಕನ್ನು ಭೂತಕಾಲದ ಗೆರೆಯಿಂದ ನಾಜೂಕಾಗಿ ದಾಟಿಸಿ ವರ್ತಮಾನಕ್ಕೆ ಅಣಿಗೊಳಿಸುತ್ತಾರೆ; ಭವಿಷ್ಯಕ್ಕೆ ಮಾದರಿಯಾಗಿಸುವುದರ ಜೊತೆಗೆ ಉಳಿದೆಲ್ಲ ಪಾತ್ರ-ಚಿತ್ರಗಳನ್ನು ಅದೇ ಅರಿವಿನ ಕಣ್ಣಿಂದ ನೋಡಬೇಕಾದ ಅಗತ್ಯತೆಯನ್ನು ಬಿತ್ತುತ್ತಾರೆ.

ಕವಿತೆ, ಕಥೆ, ನಾಟಕ, ಮಹಾಕಾವ್ಯ ಹಾಗೂ ಕಾದಂಬರಿಗಳಿಗೆ ಭೂಮಿಕೆಯಾಗಿರುವ ಕರ್ಣ ಮತ್ತೆ ಮತ್ತೆ ವರ್ತಮಾನಕ್ಕೆ ಇದಿರಾಗುತ್ತಾನೆ. ರವೀಂದ್ರನಾಥ ಠ್ಯಾಗೋರರಂಥ ಮಹತ್ತರ ಕವಿಗಳ ಲೇಖನಿಯಲ್ಲಿ 'ಕರ್ಣ ಕುಂತಿ ಸಂಗ್ಬಾದ್' ಎಂಬ ಕವಿತೆಯಾಗುವ ಕರ್ಣನು 'ರಂಜಿತ್ ದೇಸಾಯಿ'ಯವರ 'ಕರ್ಣ' ಹಾಗೂ ಶಿವಾಜಿ ಸಾವಂತ್‌ರವರ 'ಮೃತ್ಯುಂಜಯ್' ಕಾದಂಬರಿಯಲ್ಲಿ ಚಿತ್ರಿತಗೊಂಡು ಆಧುನಿಕ ಭಾರತದಲ್ಲಿ ಹೆಚ್ಚು ಚರ್ಚಿತಗೊಂಡಿದ್ದಾನೆ. ಕರ್ಣನ ಹೆಂಡತಿಯ ಕಣ್ಣೋಟದಲ್ಲಿ ಕಾಣುವ 'ಕವಿತಾ ಸೇನ್'ರವರ 'ದಿ ಔಟ್‌ಕಾಸ್ಟ್ ಕ್ವೀನ್' ಕೃತಿ ಹಾಗೂ ದ್ರೌಪದಿಯ ದೃಷ್ಟಿಕೋನದಲ್ಲಿ ಅನಾವರಣಗೊಂಡ 'ಚಿತ್ರಾ ಬ್ಯಾನರ್ಜಿ'ಯವರ 'ದಿ ಪ್ಯಾಲೇಸ್ ಆಫ್ ಇಲ್ಯೂಷನ್ಸ್' ಕೃತಿಗಳು ಹೊಸ ನೆಲೆಗಳಲ್ಲಿ ಓದುಗರ ಗಮನ ಸೆಳೆಯುತ್ತವೆ. ಕನ್ನಡದಲ್ಲೂ 'ಅನಂತ ಪೈ'ಯವರ 'ಕರ್ಣ', 'ಎಂ.ಎ.ಜಯರಾಮರಾವ್'ರವರ 'ಮಹಾಭಾರತದ ಕರ್ಣ', 'ಎಚ್. ಲಕ್ಷ್ಮೀನಾರಾಯಣಸ್ವಾಮಿ'ಯವರ 'ತೊಗಲಚೀಲದ ಕರ್ಣ' (ಮಹಾಕಾವ್ಯ), 'ಪರಮ್ ಭಾರದ್ವಾಜ'ರವರ 'ಕರ್ಣಕುಂಡಲಧಾರಿಣಿ' (ಕಿರು ಕಾದಂಬರಿ) ಹಾಗೂ ಆದ್ಯರಾಮಾಚಾರ್ಯರ 'ರಾಧೇಯ' ಕೃತಿಗಳೆಲ್ಲ ಕರ್ಣನನ್ನು ಮತ್ತೆ ಮತ್ತೆ ಮುನ್ನೆಲೆಗೆ ತಂದು ನಿಲ್ಲಿಸುತ್ತವೆ. ಈ ಹಾದಿಯಲ್ಲಿ ಹೊಸದೊಂದು ಹೆಜ್ಜೆ ಜಗದೀಶ ಹಾದಿಮನಿಯವರ 'ಕೊನೆಯಿರದ ಬಾನು' ಎಂಬ ನಾಟಕವಾಗಿದೆ.

ಕರ್ಣ ಸ್ವಭಾವತಃ ದುಷ್ಟನೇ? ದುರುಳನೇ? ಪ್ರತಿಕೂಲ ಸನ್ನಿವೇಶಗಳು ಆತನನ್ನು ಅಸಹಾಯಕನನ್ನಾಗಿ ಮಾಡಿದವೇ? ಎಂಬ ಪ್ರಶ್ನೆಗಳೇ ಇಂತಹ ನಾಟಕವನ್ನು ಬರೆಸಿದಂತಿವೆ. ಇಲ್ಲಿ ನಾಟಕಕಾರರು ಕಥಾನಾಯಕನನ್ನು ಕೇವಲ ಒಂದು ಪಾತ್ರವಾಗಿ ನೋಡದೆ ಗುಣ-ಸ್ವಭಾವಗಳ ದೃಷ್ಟಿಕೋನದಲ್ಲಿ ಒಬ್ಬ ಮನುಷ್ಯನನ್ನಾಗಿ ನೋಡಿ, ತಾವು ಕಂಡ ಬಗೆಯನ್ನು ಓದುಗ ವಲಯಕ್ಕೂ ತೆರೆದಿಡುತ್ತಾರೆ. ಕರ್ಣನಾದಿಯಾಗಿ ಉಳಿದೆಲ್ಲ ಪಾತ್ರಗಳನ್ನು ವಿವೇಕದ ಕಣ್ಣಿಂದಲೇ ನೋಡುವ ಲೇಖಕರ ಎಚ್ಚರಿಕೆಯ ನಡೆಯು ಸದ್ಯದ ಲೇಖಕರಿಗೆಲ್ಲ ಮಾದರಿ. ಪ್ರತೀ ಸನ್ನಿವೇಶವನ್ನು ವಾಸ್ತವದ ಕನ್ನಡಿಗೆ ಸೂಕ್ಷ್ಮವಾಗಿ ಬಿಂಬಿಸುವ ಹಾಗೂ ಹಲ-ಕೆಲವು ಪ್ರಶ್ನೆಗಳೊಂದಿಗೆ ಚಾವಟಿ ಬೀಸುವ ಲೇಖಕರ ಜಾಣ್ಮೆ ಮೆಚ್ಚುವಂಥದ್ದು. ಹಾಗೆ ಮೂಲಕ್ಕೆ ಬಾಧೆ ಬಾರದಂತೆ, ಅತಿಮಾನುಷತೆಗಳು ಹೆಚ್ಚು ಇಣುಕದಂತೆ ತೀರಾ ಸಹಜವಾಗಿ ಹೆಣೆದ ಕಥಾನಕವಿದು. ಗದ್ಯಮಾದರಿಯಲ್ಲಿದ್ದರೂ ಪದ್ಯದ ಲಯವನ್ನೇ ಉಣಬಡಿಸುತ್ತಾ ಸಾಗುವ ಇಪ್ಪತ್ಮೂರು ದೃಶ್ಯಗಳು ಗೀತನಾಟಕದ ಮುದ ನೀಡುತ್ತವೆ. ಮುಖ್ಯವಾಗಿ ನಾಣ್ಣುಡಿ-ಜಾಣ್ಣುಡಿ,

ಆಡುಭಾಷಾ ಸೊಗಸು, ರೂಪಕಗಳು ಹಾಗೂ ಪದಸಮೃದ್ಧಿಯ ಭಾಷಾಪ್ರೌಢಿಮೆಯೇ ಕೃತಿಯನ್ನು ಗೆಲ್ಲಿಸುತ್ತದೆ.

ನಾಟಕಕಾರರು ಮೂಲವನ್ನೇ ಅನುಸರಿಸಿದ್ದರೂ ಹಲವು ಹೊಸತನಗಳನ್ನು ಮೆರೆದಿದ್ದಾರೆ. ಅತಿಮಾನುಷ ಶಕ್ತಿಗಳನ್ನು ಹೊರಗಿಟ್ಟು ವೈಚಾರಿಕತೆಯ ಸರಳ ರೇಖೆಯಲ್ಲಿ ಮುಂದುವರಿಸುತ್ತಾರೆ. ಮಂತ್ರಫಲದಿಂದ ಹುಟ್ಟುವ ಕರ್ಣನನ್ನು ಒಪ್ಪಿಕೊಳ್ಳುವ ಲೇಖಕರು ವಸ್ತ್ರಾಪಹರಣದ ಸಂದರ್ಭಕ್ಕೆ ಕೃಷ್ಣನನ್ನು ಕೈಬಿಟ್ಟು ಧೃತರಾಷ್ಟ್ರನನ್ನು ಮೇಲ್ಪಂಕ್ತಿಯಲ್ಲಿಟ್ಟು ತಿಳಿಗೊಳಿಸುತ್ತಾರೆ. ರಾಯಭಾರಿಯಾಗಿ ಬಂದ ಕೃಷ್ಣನು ಅವಮಾನಿತನಾದರೂ ವಿಶ್ವರೂಪ ತೋರಿಸಲಾರ. ಕೊನೆಯಲ್ಲಿ ಕರ್ಣನಿಗೂ ವಿಶ್ವರೂಪ ತೋರುವ ಕೃಷ್ಣನ ಅನುಪಸ್ಥಿಯಲ್ಲಿ ದಾನ ಬೇಡುವ ಬ್ರಾಹ್ಮಣನನ್ನಿಟ್ಟು ಹೊಸತನವನ್ನು ಮೆರೆಯುತ್ತಾರೆ. ಕರ್ಣನು ಮೂಲಭಾರತದ ಅನೇಕ ಸಂದರ್ಭಗಳಲ್ಲಿ ದಾರ್ಷ್ಟ್ಯನಾಗಿ, ದುರುಳನಾಗಿ, ಅವಿವೇಕದ, ಆಕ್ರೋಶದ ಮಾತುಗಳಿಂದ ಕಂಗೊಳಿಸಿದರೆ ಇಲ್ಲಿ ಮಾತ್ರ ಸೌಮ್ಯವಾಗಿಯೇ ಕಾಣಿಸುತ್ತಾನೆ. ಕುರುಕ್ಷೇತ್ರದ ಆರಂಭದ ಪಟ್ಟಾಭಿಷೇಕದಲ್ಲಿ ಭೀಷ್ಮಪಟ್ಟವನ್ನು ವಿರೋಧಿಸಿದರೂ ಅದು ಸೌಮ್ಯವಾಗಿ ಮಾತ್ರ. ಅದೂ ಶತಾಯುಷಿಯ ಮೇಲಿನ ಕಾಳಜಿ ಹಾಗೂ ಯುದ್ಧ ಗೆಲ್ಲುವ ತಂತ್ರವಾಗಿ ಮಾತಾಗುತ್ತಾನೆಯೇ ಹೊರತು ತನ್ನೊಳಗಿನ ಅಹಂಕಾರದಿಂದಲ್ಲ. ಅದರಂತೆಯೇ ಭೀಷ್ಮರೂ ಯಾವುದೇ ಶಪಥ ಮಾಡದೆ ಸಮಾಧಾನದಿ ಮುನ್ನಡೆಯುತ್ತಾರೆ. ಇಂತಹ ಬದಲಾವಣೆಗಳ ಮೂಲಕ ಜಾಗತಿಕ ಸಂಘರ್ಷಕ್ಕೆ ವಿವೇಕದ ಕಣ್ಣುಗಳ ಔಷಧಿಯ ಅಗತ್ಯತೆಯನ್ನು ಸಾರಿ ಹೇಳುತ್ತಾರೆ. ಜೊತೆಗೆ ದುರುಳತನದ ಎಲ್ಲ ಪ್ರಸಂಗಗಳ ಅರಿವಿದ್ದೂ ಮುನ್ನಡೆಯುವ ಕರ್ಣನು ಸೌಮ್ಯವಾಗಿ ಪ್ರತಿಭಟಿಸಿಯೂ ಗೆಳೆತನಕ್ಕಾಗಿ ಅಸಹಾಯಕತೆಯಿಂದ ಹೆಜ್ಜೆ ಬದಲಿಸುತ್ತಾನೆ. ಕುಂತಿ ಹಾಗೂ ಸೂರ್ಯದೇವನಿಗೆ ಎಸೆಯುವ ಪ್ರಶ್ನಾಸರಪಳಿ ಆತ್ಮಾವಲೋಕನಕ್ಕೆ ಒತ್ತಾಯಿಸುತ್ತದೆ.

ಗಂಗೆಯ ತಟದಲ್ಲಿ ಕುಂತಿಯ ಮಂತ್ರ ಕುತೂಹಲಕ್ಕೆ ಪ್ರತ್ಯಕ್ಷಗೊಂಡ ಸೂರ್ಯದೇವನಿಂದ ಪುತ್ರಪ್ರಾಪ್ತಿಯಾಗುವುದರೊಂದಿಗೆ ನಾಟಕ ಆರಂಭಗೊಳ್ಳುತ್ತದೆ. ಕುರುಕ್ಷೇತ್ರದಿ ಅರ್ಜುನನ ಅಧರ್ಮದ ಬಾಣಾಘಾತಕ್ಕೆ ಕೊರಳು ಹರಿದು ರಕ್ತದ ಮಡುವಿನಲ್ಲಿ ಅನಾಥವಾಗಿ ಬಿದ್ದುಕೊಂಡಿರುವ ಕರ್ಣನು ಬೇಡಿ ಬಂದ ಬ್ರಾಹ್ಮಣನಿಗೆ ದಾನಗೈಯ್ದು, ಕೈಮುಗಿಯುತ್ತಲೇ ಪ್ರಾಣ ಬಿಡುವ ಕರುಳುರಿಯುವಂತಹ ಸನ್ನಿವೇಶದೊಂದಿಗೆ ಮುಕ್ತಾಯವಾಗುತ್ತದೆ. ಕರ್ಣನ ಹುಟ್ಟು-ಸಾವಿನ ಎರಡೂ ಸಂದರ್ಭಗಳಲ್ಲಿ ಮಹಾಘಟಾನುಘಟಿಗಳಿದ್ದೂ ಅನಾಥನಂತೆ ಮರೆಯಾಗುವ ಆತನ ಅಸಹಾಯಕತೆ ಹಾಗೂ ಸಮಾಜದ ವಾಸ್ತವದ ಕ್ರೌರ್ಯವನ್ನು ತೆರೆದ ಕಣ್ಣುಗಳಿಂದ ದರ್ಶಿಸಿದ್ದಾರೆ. ಅದಕ್ಕೆಂದೇ ಕರ್ಣನ ಜನನ-ಮರಣಗಳ ನಡುವಿನ ಕಥಾನಕವನ್ನೇ ನಾಟಕದ ತಿರುಳನ್ನಾಗಿಸಲಾಗಿದೆ.

ಇಡೀ ನಾಟಕದಲ್ಲಿ ಕರ್ಣನ ಶುಭ್ರಮುಖವನ್ನು ಬಿಚ್ಚಿಡುವ ನಾಟಕಕಾರರು ಶ್ರೇಷ್ಠ ಕುಲದಲ್ಲಿ ಹುಟ್ಟಿ ನೀರು ಪಾಲಾದರೂ ಪಾಲನೆಯಾಗುವ, ಸೂತಪುತ್ರನೆಂದು ಹೆಜ್ಜೆಹೆಜ್ಜೆಗೂ ಘಾಸಿಗೊಂಡರೂ ಸಮಚಿತ್ತದಿ ತೇಲುವ, ಗುರುಶ್ರೇಷ್ಠರಿಂದಲೇ ಅವಮಾನಕ್ಕೆ, ಶಾಪಕ್ಕೆ ಒಳಗಾದಾಗಲೂ ತಣ್ಣಗೆ ಎದೆಗಿಳಿಯುವ, ಭವಿಷ್ಯದ ಅರಿವು ಮತ್ತು ಎಚ್ಚರಿಕೆಯ ನಡುವೆಯೂ ದಾನಸರಣಿಗೈಯ್ಯುವ ಹಾಗೂ ವಾಸ್ತವದ ಅರಿವಿದ್ದರೂ ಗೆಳೆತನಕ್ಕೆ ಕಿರೀಟವಾಗುವ, ತನ್ನದೆಂಬುದೆಲ್ಲವನು ಸಮರ್ಪಿಸುವ ಆತನನ್ನು ಮೇರುಕಿರೀಟದಲ್ಲಿ, ಸಹೃದಯರ ಹೃನ್ಮನಗಳಲ್ಲಿ ಚಿರಸ್ಥಾಯಿಯಾಗಿಸುತ್ತಾರೆ. ಇನ್ನೊಂದೆಡೆ ವಿದ್ಯೆಗಾಗಿ ಸುಳ್ಳಾಡುವ, ದ್ಯೂತ, ವಸ್ತ್ರಾಪಹರಣ, ಗೋಗ್ರಹಣ ಸಂದರ್ಭಗಳಲ್ಲಿ ಮೌನವಾಗಿರುವ, ಭೀಷ್ಮರಿಗೆ ಅವಮಾನಗೈಯ್ಯುವ, ವಾಮಮಾರ್ಗದಲ್ಲಿ ಕುಮಾರನಿಗೆ ಬಾಣಗೈಯ್ಯುವ ಹಾಗೂ ಕೌರವನ ದುರುಳತನಕ್ಕೆಲ್ಲ ಜೊತೆಯಾಗಿ ನಿಲ್ಲುವ ಮತ್ತೊಂದು ಮುಖವನ್ನೂ ತೆರೆದಿಡುತ್ತಾರೆ. ಇಷ್ಟನ್ನೇ ಚಿತ್ರಿಸಿದ ಲೇಖಕರು ಮೂಲದಿಂದ ಒಂದಷ್ಟು ಬದಲಾವಣೆ ಮಾಡಿಕೊಂಡು ಹೊಸ ಮಾರ್ಗದತ್ತ ಕೊಂಡೊಯ್ಯುತ್ತಾರೆ. ವಾಸ್ತವದ ನೆರಳಿಗಂಟಿಸಿ ಹಲವು ಪ್ರಶ್ನೆಗಳೊಂದಿಗೆ ವರ್ತಮಾನಕ್ಕೆ ಮುಖಾಮುಖಿಯಾಗಿಸುವುದರ ಮೂಲಕ ಕೃತಿಯನ್ನು ಮೇಲಕ್ಕೆತ್ತುತ್ತಾರೆ.

ಕೃತಿಯು ಸಹಜ ಕುತೂಹಲದೊಂದಿಗೆ ಹಲವು ವಿಶೇಷತೆಗಳನ್ನು ಅಲ್ಲಲ್ಲಿ ಬಿಚ್ಚುತ್ತಲೆ ಮುಂದಡಿ ಇಡುತ್ತದೆ. ಎರಡನೆಯ ದೃಶ್ಯದ ತಾಯಿ–ಮಗುವಿನ ಅಗಲಿಕೆಯು ಸಶಕ್ತವಾಗಿ ಚಿತ್ರಣಗೊಂಡು ಶೋಕದ ಹೊನಲಾಗಿ ಹರಿಯುತ್ತಾ ರಾಘವಾಂಕನ ಚಂದ್ರಮತಿಯನ್ನು ಹಾಗೂ ಷಡಕ್ಷರದೇವನ ತಿರುಕೊಳವಿನಾಚಿಯನ್ನು ನೆನಪಿಸುತ್ತದೆ. ರಾಜಕುಮಾರರ ಬಿಲ್ವಿದ್ಯಾ ಪರೀಕ್ಷಾ ಪ್ರದರ್ಶನವು ಅಚ್ಚುಕಟ್ಟಾಗಿ ಬಿತ್ತರಗೊಂಡಿದ್ದು ನಾಟಕದ ಗಡಿಯನ್ನು ದಾಟಿ ಕಾದಂಬರಿಯ ಭೂಮಿಕೆಯನ್ನು ನೀಡಿದಂತಿದೆ. ಅದಿರಥ–ರಾಧೆ ಹಾಗೂ ಘಟೋತ್ಕಚ–ಹಿಡಿಂಬೆಯರ ನಡುವಿನ ಸಂಭಾಷಣೆಗಳು ಉತ್ತರ ಕರ್ನಾಟಕದ ನೆಲಮೂಲ ಸಂಸ್ಕೃತಿ ಹಾಗೂ ಭಾಷೆಯ ಮಣ್ಣವಾಸನೆಯಿಂದ ಶ್ರೀಮಂತವಾಗಿವೆ. ಚಕ್ರವ್ಯೂಹ ಭೇದಿಸುವ ಅಭಿಮನ್ಯುವಿನ ಸನ್ನಿವೇಶವಂತೂ ಮೈ ಜುಮ್ಮೆನ್ನುವಷ್ಟು ಸಶಕ್ತವಾಗಿದೆ. ಕರ್ಣನು ತಂದೆ ಸೂರ್ಯದೇವನೊಂದಿಗೆ ಹಾಗೂ ತಾಯಿ ಕುಂತಿಯೊಂದಿಗೆ ನಡೆಸುವ ಸಂಭಾಷಣೆಗಳು ಇಡೀ ಕೃತಿಯ ಹೃದಯಭಾಗದಂತಿವೆ. ಬಂಡಾಯದ ಅಂಗಳದಿಂದ ಬೀಸುವ ಕರ್ಣನ ಚಾವಟಿಯ ಏಟುಗಳು ಕೃತಿ ಮುಗಿದ ಮೇಲೂ ಮಾತಾಡುತ್ತವೆ; ಭೂತ–ಭವಿಷ್ಯದ ಸಂಕಟ–ಸಂಕೋಲೆಗಳಿಗೆ ಕನ್ನಡಿ ಹಿಡಿದು, ಪ್ರಶ್ನೆಗಳ ಗೂಡಜಾಡನ್ನೇ ವರ್ತಮಾನದ ಸಂತೆಗೆ ನುಗ್ಗಿಸುತ್ತವೆ.

ಭಾಷೆ ಮತ್ತೆ ಮತ್ತೆ ಗೆದ್ದಿದೆ. ಸನ್ನಿವೇಶ ಹಾಗೂ ಪಾತ್ರಕ್ಕನುಗುಣವಾದ

ಭಾಷೆಯನ್ನು ಬಳಸಿದ ಲೇಖಕರ ಜಾಣ್ಮೆ ಮೆಚ್ಚುವಂತದ್ದು. ಅರಮನೆ ಹಾಗೂ ಗುಡಿಸಲುಗಳೊಂದಿಗೆ ಪಾತ್ರ ಬದಲಿಸುವ ಭಾಷೆಯು ಸಹಜ ಬದುಕಿನ ಬಯಲಲ್ಲಿ ಸುವಾಸನೆಯನ್ನೇ ಚೆಲ್ಲುತ್ತದೆ. ಸಹಜವಾಗಿ ಉತ್ತರ ಕರ್ನಾಟಕದ ಭಾಷಾಪದಗಳು, ಆಡುಭಾಷೆಯ ಪದಪುಂಜ-ಗಾದೆ-ಉಕ್ತಿ-ಸೂಕ್ತಿಗಳು ಮೆರುಗನ್ನಿಟ್ಟಂತೆ ದಕ್ಷಿಣ ಕರ್ನಾಟಕದ ಪದಗಳೂ ಒಳನುಗ್ಗಿವೆ. ಉತ್ತರ ಕರ್ನಾಟಕದ ಬಾತಾಕಣಿ, ಬಾಧನಾ, ಹರನಾಳಿಗಿ, ಎಡಬಿಡಂಗಿ, ಬರಗೆಟ್ಟು ಮುಂತಾದ ಪದಗಳು ಗಮನ ಸೆಳೆದರೆ, ಇದ್ಯೆ, ಬಿಡ್ತು ಅನ್ನು, ಒಸಿ ತಾಳು ಹಾಗೂ ಕ್ವಾಪದಂತಹ ದಕ್ಷಿಣದ ಪದಗಳು ಇಣುಕಿ ನೋಡುತ್ತಾ ಕೃತಿಯ ಸೌಂದರ್ಯವನ್ನು ಇಮ್ಮಡಿಸಿವೆ.

ಬಂಡಾಯದ ಬಾವುಟವು ಕೃತಿಯುದ್ದಕ್ಕೂ ವಿಭಿನ್ನ ಮುಖಗಳಲ್ಲಿ ಬುಸುಗುಟ್ಟಿದೆ. ಅನೇಕ ಪಾತ್ರ ಮತ್ತು ಸನ್ನಿವೇಶಗಳ ಮೂಲಕ ಓದುಗರನ್ನು ಪುರಾಣ ಹಾಗೂ ವರ್ತಮಾನದ ಸಂಗತಿಗಳಿಗೆ ಮುಖಾಮುಖಿಯಾಗಿಸುವ ಲೇಖಕರು ಬಂಡಾಯವನ್ನು ಮುಂದಿನ ಸಾಲಿನಲ್ಲೇ ನಿಲ್ಲಿಸಿದ್ದಾರೆ. ಮೂಲವನ್ನು ಒಪ್ಪಿಕೊಳ್ಳುವ ಅದಿರಥನಿಗೆ "ಆಗಸ-ಭೂಮಿ ಒಂದಾಗಾಕ ಸಾಧ್ಯ ಇಲ್ಲಂತಾ ದೂರಾನೇ ಉಳಿದ್ರ ಹೆಂಗ?" ಎಂದು ರಾಧೆಯ ಮೂಲಕ ಮೂಢನಂಬಿಕೆ, ಸಂಪ್ರದಾಯ ಹಾಗೂ ವ್ಯವಸ್ಥೆಯನ್ನು ಪ್ರಶ್ನಿಸುತ್ತಾರೆ; ಬದಲಾವಣೆಯ ಗಾಳಿಗೆ ಹೆಗಲು ಕೊಡುತ್ತಾರೆ. ಮೂಲದಲ್ಲಿ ಕಿಡಿಕಿಡಿಯಾಗುವ ದ್ರೌಪದಿಯನ್ನು ಯಥಾವತ್ತಾಗಿ ಚಿತ್ರಿಸುವ ಜೊತೆಗೆ "ದುಶ್ಯಲೆಗೆ ಈ ಗತಿ ಬಂದಿದ್ದರೆ, ಏನು ಮಾಡುತ್ತಿದ್ದೆ ಮಹಾರಾಜ" ಎಂದು ಧರ್ಮರಾಜನಿಗೆ ತಣ್ಣಗೆ ಇರಿಯುತ್ತಾರೆ. ಭಾನುಮತಿಯಂತೂ ಕಟುವಿಮರ್ಶಕಿಯಾಗಿ ಹೊಸತನ ಮೂಡಿಸುತ್ತಾಳೆ. ಸ್ವಯಂವರದಲ್ಲಿ ಅವಳ ಮನಸ್ಸನ್ನು ಗೆಲ್ಲದೆ ದಾಷ್ಟ್ಯದಿಂದ ಹೊತ್ತು ತಂದ ದುರ್ಯೋಧನನಿಗೆ "ಏನಪ್ಪಾ ರಾಜಕುಮಾರ" ಎಂದೆನ್ನುವ ವ್ಯಂಗ್ಯ ಧ್ವನಿಪೂರ್ಣವಾಗಿದೆ. ಕಳ್ಳನಿಗೆ ಕಳ್ಳನ ಸಾಕ್ಷಿಯೆಂಬಂತೆ ಅವನಿಗೆ ಸಹಾಯ ಮಾಡಿದ ಕರ್ಣನನ್ನೂ "ಇವನ್ಯಾವ ಸೀಮೆ ರಾಜಕುಮಾರ"ನೆಂದು ಅಚ್ಚ ಉತ್ತರ ಕರ್ನಾಟಕ ಭಾಷೆಯಲ್ಲಿ ಹಳಿದು, ಕಥಾನಾಯಕನನ್ನೂ ಕಟಕಟೆಯಲ್ಲಿ ನಿಲ್ಲಿಸುತ್ತಾರೆ. ಆ ಮೂಲಕ ತಪ್ಪು ತಪ್ಪೇ, ಯಾರು ಮಾಡಿದರೇನು? ಮುಲಾಜಿಲ್ಲದೆ ಛೀಮಾರಿ ಹಾಕುತ್ತಾರೆ. "ಅವನಿಗೆ ನೀ ಹೊಗಳು, ನಿನ್ನ ಅವ ಹೊಗಳು' ಎಂದೇಳಿ ಈ ಜಗತ್ತಿನ ಬೂಟಾಟಿಕೆಗೆ ಮರ್ಮಾಘಾತ ನೀಡುತ್ತಾರೆ. "ವಿದ್ಯೆ ಯಾರ ಸ್ವತ್ತೂ ಅಲ್ಲ"ವೆನ್ನುವ ಕರ್ಣನ ಮಾತಂತೂ ಇತಿಹಾಸದ ಕಪ್ಪು ಚುಕ್ಕೆಗಳನ್ನೆಲ್ಲ ತೆರೆದಿಟ್ಟು ವಾಸ್ತವದ ಅಂಗಳದಲ್ಲಿನ ಕಸ-ಕಡ್ಡಿಗಳನೆಲ್ಲ ಸ್ವಚ್ಛಗೊಳಿಸಲು ಸಿದ್ಧಗೊಳಿಸುತ್ತಾರೆ. ಕೃಷ್ಣ "ಬಳೆ ತೊಟ್ಟವರೆಲ್ಲಾ ಬಲಹೀನರೆಂದು ಬಗೆಯದಿರು ದುರ್ಯೋಧನಾ" ಎಂದೆನ್ನುವ ಮಾತು ಸ್ತ್ರೀವಾದದ ಮೂಲಧ್ವನಿಯಾಗಿ ಅನುರಣಿಸಿದೆ. ಜೊತೆಗೆ ಕೌರವ ಪಡೆಯ ಎಲ್ಲ ದಾಷ್ಟ್ಯ ಸಂದರ್ಭಗಳಲ್ಲೂ ಅಚ್ಚರಿಯಿಂದ ಹಿಂದಡಿಯಿಡುವ ಕರ್ಣನನ್ನು ವಿಭಿನ್ನ

ಮಾದರಿಯಲ್ಲಿ ನಿಲ್ಲಿಸುವ ಲೇಖಕರು ಬಂಡಾಯದ ಮೊಳಗಿಟ್ಟೂ ಅಸಹಾಯಕತೆಯನ್ನು ಬಿಂಬಿಸುತ್ತಾರೆ.

ಕೃತಿಯಲ್ಲಿನ ಎರಡು ಸ್ವಯಂವರ ಸಂದರ್ಭಗಳು ಎರಡು ಕವಲುಗಳಲ್ಲಿ ಎದುರಾಗುತ್ತವೆ. ಭಾನುಮತಿಯ ಸ್ವಯಂವರದಲ್ಲಿ ಯಾವುದೇ ಸ್ಪರ್ಧೆಯಿಲ್ಲದೆ ತನಗಿಷ್ಟವಾದ ರಾಜನ ಕೊರಳಿಗೆ ಮಾಲೆ ಹಾಕುವ ಸ್ವಾತಂತ್ರ್ಯವೂ, ದ್ರೌಪದಿಯು ಸ್ಪರ್ಧೆಯಲ್ಲಿ ಗೆದ್ದ ರಾಜರುಗಳಲ್ಲಿ ತನಗಿಷ್ಟವಾದವರನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶಗಳು ಸ್ತ್ರೀ ಸ್ವಾತಂತ್ರ್ಯವನ್ನು ಒತ್ತಿ ಹೇಳಿದಂತಿವೆ. ಆದರೆ ದಾಷ್ಟ್ಯದಿಂದ ಭಾನುಮತಿಯನ್ನು ಹೊತ್ತೊಯ್ಯುವ ಪ್ರಸಂಗವು ಪುರಾಣ-ಇತಿಹಾಸದ ದುರಂತಗಳನ್ನು ನೆನಪಿಸುತ್ತದೆ. ಸೂತಪುತ್ರನನ್ನು ವರಿಸಲಾರೆನೆನ್ನುವ ದ್ರೌಪದಿಯ ಮಾತಿನಲ್ಲಿ ಅವಳ ಅಭಿವ್ಯಕ್ತಿ ಸ್ವಾತಂತ್ರ್ಯದ ಬೆಳಕಿನೊಂದಿಗೆ ಕುಲ-ಜಾತಿಯ ಕತ್ತಲೆಯನ್ನೂ ಬಿಚ್ಚಿಡುತ್ತದೆ. ಈ ಸ್ಪರ್ಧೆಯಲ್ಲಿ ಆಸಕ್ತ ಪ್ರಜೆಗಳೂ ಭಾಗವಹಿಸಬಹುದೆನ್ನುವ ದ್ರುಪದನ ಮಾತು ಪ್ರಜಾಪ್ರಭುತ್ವವನ್ನು ಗೆಲ್ಲಿಸಿದಂತೆ ಕಂಡರೂ ಸೂತಪುತ್ರನಿಗೆ ಅವಕಾಶವಿಲ್ಲವೆನ್ನುವ ನುಡಿ ಒಂದಷ್ಟು ಗೊಂದಲವನ್ನೂ, ದೊಡ್ಡವರ ದೊಡ್ಡತನದ ಹಿಂದಿನ ಕತ್ತಲೆಯನ್ನೂ ತೆರೆದಿಡುತ್ತದೆ.

ಇಡೀ ನಾಟಕದಲ್ಲಿ 'ಉರುವಲು ಪ್ರಸಂಗ' ವಿಶೇಷವೆನಿಸುತ್ತದೆ. ಎಲ್ಲರೂ ಕೈಚೆಲ್ಲಿದ ಸಂದಿಗ್ಧತೆಯ ಪರಮಾವಧಿಯಲ್ಲಿ ಅರಮನೆಯನ್ನೇ ಸೆಳೆದು ಕೊಡುವ ಕರ್ಣನ ದಾನ, ಶಿಥಿಲಾವಸ್ಥೆಯಲ್ಲಿರುವ ಸೈನಿಕ-ಪ್ರಜೆಗಳ ಮನೆಗಳು ಅರಮನೆಗಿಂತಲೂ ಶ್ರೇಷ್ಠವೆನ್ನುವ ವಿವೇಕ ಹಾಗೂ ಪ್ರಜಾರಕ್ಷಣೆಯ ರಾಜನ ಜವಾಬ್ದಾರಿಯನ್ನು ಅತ್ಯಂತ ಜಾಗರೂಕವಾಗಿ ಪ್ರತಿಪಾದಿಸಿ, ಪ್ರಜಾಪ್ರಭುತ್ವವನ್ನು ಗೆಲ್ಲಿಸುತ್ತದೆ. ಜೊತೆಗೆ ಆತಿಥ್ಯ ಸ್ವೀಕಾರಕ್ಕೆ ಹೊಸದೊಂದು ಭಾಷ್ಯ ಬರೆಯುತ್ತ ಕರ್ಣನನ್ನು ಮೇರುಗಿರಿಯಲ್ಲಿ ಪ್ರತಿಷ್ಠಾಪಿಸುತ್ತದೆ.

'ಸರಸ-ವಿರಸ-ಸಮರಸ'ದ ಬಿಂಬ ಪ್ರತಿಬಿಂಬಗಳಂತೆ ಮಾತಿಗಿಳಿಯುವ ರಾಧೆ-ಅದಿರಥರು ಹಾಗೂ ದುರ್ಯೋಧನ-ಭಾನುಮತಿಯರು ಹಳ್ಳಿಗಾಡಿನ ಬದುಕನ್ನು ಜೀವಂತವಾಗಿಡುವ ಪ್ರತಿನಿಧಿಗಳಂತೆ ಹಾಗೂ ದಾಂಪತ್ಯದ ಬೇವು-ಬೆಲ್ಲದ ಸವಿಪಾಕದಂತೆ ಸವಿಯುಣಿಸುತ್ತವೆ. ಇಲ್ಲಿನ ಸಂಭಾಷಣೆಗಳು ಮುದ್ದಣ-ಮನೋರಮೆಯರನ್ನು ನೆನಪಿಗೆ ತರುತ್ತವೆ.

ಕೃತಿಯಲ್ಲಿ ಪದೇ ಪದೇ ಎದುರುಗೊಳ್ಳುವ ಕ್ಷಮೆಯ ಸನ್ನಿವೇಶಗಳು ವರ್ತಮಾನಕ್ಕೆ ಇದರ ಅಗತ್ಯತೆಯನ್ನು ಹೇಳಿದಂತಿದೆ. ಮಹಾವೀರನೂ, ಸಾಹಸಿಯೂ, ಗುಣವಂತನೂ ಹಾಗೂ ಶ್ರೇಷ್ಠ ಕುಲಪುತ್ರನಾಗಿದ್ದ ಅಂಗಾಧಿಪತಿ ಕರ್ಣನ ಕ್ಷಮೆಯ ಪ್ರಸಂಗಗಳು ಗಮನ ಸೆಳೆಯುತ್ತವೆ. ವಿದ್ಯೆ ಕಲಿಯುವ ಉತ್ಸಾಹದಲ್ಲಿ ಸುಳ್ಳು

ಹೇಳಿದರೂ ಗುರುವಿಗೆ ಗೊತ್ತಾದ ತಕ್ಷಣವೇ ತಲೆತಗ್ಗಿಸಿ ಪರಶುರಾಮರಿಗೆ ಕೇಳುವ ಕ್ಷಮೆ, ದ್ರೌಪದಿಯ ಸ್ವಯಂವರದಲ್ಲಿ ಪಾಲ್ಗೊಂಡು ಅವಮಾನಿತನಾಗಿಯೂ ಕೇಳುವ ಕ್ಷಮೆ, ಅದರಂತೆ ದ್ರೋಣ, ಪುರೋಹಿತ, ಅಭಿಮನ್ಯು, ಭೀಷ್ಮರಿಗೆ ಮಾತ್ರವಲ್ಲದೇ ಕುರುಕ್ಷೇತ್ರದ ರಾಜಪಟಾಭಿಷಿಕ್ತನಾಗಿಯೂ ರಣರಂಗದ ಮಧ್ಯೆ ಸಾರಥಿಯಾದ ಶಲ್ಯನಿಗೆ ಕೋರುವ ಕ್ಷಮೆಗಳೆಲ್ಲ ಬೀಗುವಿಕೆಗಿಂತ ಬಾಗುವುದರಲ್ಲಿ ಜಗದ ಕ್ಷೇಮವಿದೆಯೆಂಬುದನ್ನು ಸಾರುತ್ತದೆ. ಅದರಂತೆ ಆರಂಭದಲ್ಲಿ ಕುಂತಿಯಿಂದ-ಸೂರ್ಯನಿಗೆ, ಸೂರ್ಯನಿಂದ-ಕರ್ಣನಿಗೆ ಹಾಗೂ ಇಂದ್ರನಿಂದ-ಕರ್ಣನಿಗೆ ಬೇಡುವ ಕ್ಷಮೆಗಳೆಲ್ಲ ವರ್ತಮಾನಕ್ಕೆ ದಾರಿದೀಪವಾಗುತ್ತವೆ. ತಪ್ಪಿನ ಅರಿವು ಹಾಗೂ ಅದನ್ನು ಮುಕ್ತವಾಗಿ ಒಪ್ಪಿಕೊಳ್ಳುವ ಮನಸ್ಥಿತಿ ಹಾಗೂ ತಕ್ಷಣವೇ ತಿಳಿಗೊಳಿಸುವುದರಿಂದಾಗುವ ಲಾಭಗಳನ್ನು ತೆರೆದಿಟ್ಟಿದೆ. ಇಲ್ಲಿ ಪಾತ್ರ, ಸ್ಥಾನ, ಮಾನ, ಅಂತಸ್ತುಗಳು ಮುಖ್ಯವಾಗದೇ ಮುಂದಾಗುವ ಪರಿಣಾಮ ಹಾಗೂ ಸರಳವಾಗಿ ಪರಿಹರಿಸುವ ಸಿದ್ಧಸೂತ್ರವನ್ನು ಮುಂದಿಟ್ಟಂತೆ ಕಾಣುತ್ತದೆ.

ಪೂರ್ವದ ಕಥಾನಕದಂತೆ ಗೆಳೆತನವೂ ಪರಾಕಾಷ್ಠೆಯ ತುತ್ತತುದಿಯನ್ನು ತಲುಪಿದೆ. ದುರ್ಯೋಧನನು ಕರ್ಣನನ್ನು ಅಂಗಾಧಿಪತಿಯನ್ನಾಗಿ ಮಾಡುವ, ಭಾನುಮತಿಯೊಂದಿಗಿನ ಲೆತ್ತಮನಾಟದ ಜೊತೆಗೆ ಕೆಲವು ಪ್ರಸಂಗಗಳು ಗಮನ ಸೆಳೆಯುತ್ತವೆ. ಭಾನುಮತಿಯ ಸ್ವಯಂವರದಲ್ಲಿ ಕೌರವನ ದಾಷ್ಟ್ಯಕ್ಕೆ ಬೆಂಬಲವಾಗಿ ನಿಂತ ಕರ್ಣನು ಹೋರಾಡಿ ಅವಳನ್ನು ಗೆಳೆಯನಿಗೆ ದಕ್ಕಿಸಿಕೊಡುವಲ್ಲಿ ಯಶಸ್ವಿಯಾಗುತ್ತಾನೆ. ಜಯದ್ರಥನ ಸಾಹಸವನ್ನು ಮೆಚ್ಚಿದ ಕರ್ಣನು ದುಶ್ಯಲೆಯೊಂದಿಗೆ ಮದುವೆ ಕುದುರಿಸುವ ಸಲಹೆ ಕೊಟ್ಟು ಸಫಲನಾಗುತ್ತಾನೆ. ಮುಖ್ಯವಾಗಿ ದ್ರೌಪದಿಯ ಸ್ವಯಂವರದ ಅಗ್ನಿಪರೀಕ್ಷೆಯಲ್ಲಿ ಗೆಳೆಯನಿಗಾಗಿ ಪಾಲ್ಗೊಳ್ಳುವ ಕರ್ಣನು ಅಚ್ಚರಿಯನ್ನುಂಟುಮಾಡುತ್ತಾನೆ. ಜೊತೆಗೆ ಅವಮಾನವನ್ನೂ ಅನುಭವಿಸುತ್ತಾನೆ. ಇದಕ್ಕೆ ಜೊತೆಯೆಂಬಂತೆ 'ಗೆಳೆಯನಿಗಿಲ್ಲದ ಅವಕಾಶ ತನಗೂ ಬೇಡ'ವೆಂದು ಸ್ಪರ್ಧೆಯನ್ನೇ ಧಿಕ್ಕರಿಸುವ ದುರ್ಯೋಧನ ಗೆಳೆತನಕ್ಕೆ ಸಾರ್ಥಕತೆಯನ್ನು ತರುತ್ತಾನೆ. ಎಲ್ಲಕ್ಕೂ ಕಿರೀಟಪ್ರಾಯವಾಗಿ ಯಾರಿಗೂ ಸೋಲದ, ಮಣಿಯದ ಹಠವಾದಿ, ಛಲಗಾರ ಕೌರವನು ಗೆಳೆಯನ ಕೋರಿಕೆಯ ಈಡೇರಿಕೆಗಾಗಿ ಶಲ್ಯನನ್ನು ಕರ್ಣನ ಸಾರಥಿಯಾಗುವಂತೆ ಆತನ ಕಾಲು ಹಿಡಿಯುವ ಪ್ರಸಂಗವಂತೂ ಪದಗಳಲ್ಲಿ ಹೇಳಲಾಗದ ಚಿತ್ರಣ. ಇದು ನಿಜಕ್ಕೂ ವರ್ತಮಾನದ ಬದುಕು ಹಾಗೂ ಸಂಬಂಧಗಳಿಗೆ ಅಗತ್ಯ ಮತ್ತು ಅನಿವಾರ್ಯ ಸಂದೇಶವೆನಿಸುತ್ತದೆ.

'ಅನ್ನದ ಋಣ' ಎರಡು ಪ್ರತ್ಯೇಕ ಸಂದರ್ಭಗಳಲ್ಲಿ ವ್ಯಕ್ತಗೊಂಡು ಅನ್ನದ ಅನಿವಾರ್ಯತೆ ಹಾಗೂ ಅಸಹಾಯಕತೆಗಳನ್ನು ಚಿತ್ರಿಸುತ್ತದೆ. ಕೌರವನ ಎಲ್ಲ ದಾಷ್ಟ್ಯಗಳನ್ನು ಮನಃಪೂರ್ವಕವಾಗಿ ವಿರೋಧಿಸುವ ಕರ್ಣನು ಆತನಿಗೆ ನೆರಳಾಗಿ

ತಾನು ಕೈಗೊಳ್ಳುವ ಕಾರ್ಯಗಳೆಲ್ಲವೂ ಅಧರ್ಮದ ಚಾವಡಿಯಲ್ಲಿ ಹುಟ್ಟಿರುವವೆಂಬ ಅರಿವಿದ್ದೂ, ಕೆಲವೊಮ್ಮೆ ಪ್ರತಿಭಟಿಸಿಯೂ ಪಾಲ್ಗೊಳ್ಳುವ ಸನ್ನಿವೇಶಗಳೆಲ್ಲವೂ ಆತನ 'ಅನ್ನದ ಋಣ'ದ ಅಸಹಾಯಕತೆಗೆ ಸಾಕ್ಷಿಯಾಗುತ್ತದೆ. ಧರ್ಮದ ರಾಜಮಾರ್ಗದಲ್ಲಿಯೇ ಬದುಕನ್ನು ಕಳೆದ ಭೀಷ್ಮಾಚಾರ್ಯರಿಗೆ ಜನನ, ಮರಣ, ಯುದ್ಧ ಹಾಗೂ ಅದರ ಫಲಿತಾಂಶದ ಅರಿವಿದ್ದೂ ಪಟ್ಟಾಭಿಷಿಕ್ತರಾಗಿ ಯುದ್ಧದಲ್ಲಿ ಪಾಲ್ಗೊಳ್ಳುತ್ತಾರೆ. ಅನ್ನದ ಋಣಕ್ಕಾಗಿ ದೇಹವನ್ನು ಸಮರ್ಪಿಸುತ್ತಾರೆ. ಇದರ ಮೂಲಕ ನಾಟಕಕಾರರು ಮಹಾನಾಯಕರ ಅಸಹಾಯಕತೆ ಹಾಗೂ ಅನ್ನದ ಮಹತ್ವವನ್ನು ಎದುರಿಗಿಡುತ್ತಾರೆ.

ವರ್ತಮಾನದಲ್ಲಿ ನಿಂತು ಭೂತ-ಭವಿಷ್ಯತ್ತನ್ನು ವಿವೇಕದ ಕಣ್ಣುಗಳಿಂದ ನೋಡುತ್ತಲೇ ಹೆಜ್ಜೆಹಾಕುವ ನಾಟಕಕಾರರು ವಾಸ್ತವಕ್ಕೆ ಮುಖಾಮುಖಿಯಾಗಿಸುತ್ತಲೇ ಸಾಗುತ್ತಾರೆ. ಆ ಮೂಲಕ ಓದುಗರ, ಸಮಾಜದ, ವ್ಯವಸ್ಥೆಯ ಆತ್ಮಾವಲೋಕನದ ಅಗತ್ಯತೆಯನ್ನು ಎತ್ತಿ ಹಿಡಿಯುತ್ತಾರೆ. 'ಹೆಜ್ಜೆ ಇಡುವ ಮುನ್ನ ವಿವೇಕ ಅಗತ್ಯ'ವೆನ್ನುವ ಆರಂಭದ ಕುಂತಿಯ ಕೌತುಕದ ಮಂತ್ರೋಚ್ಚಾರಣೆಯ ಸಂದರ್ಭ, "ಒಡಲನೆ ಕೊಟ್ಟರೂ ಒಡಲು ತುಂಬಿತು ಎಂದು ತೃಪ್ತಿಯಾಗನು ಮನುಜ"ನೆನ್ನುವ ದ್ರೌಪದಿಯ ಮಾತು, "ಚಾಡಿ ಹೇಳುವ ಚಾವಡಿ ಎಲ್ಲಾ ಕಡೆಗೂ ಉಂಟು" ಎಂದೇಳುವ ಪುರೋಹಿತನ ಮಾತು,"ಯಾರ್ಯಾರೋ ಹೊಗಳಿದ ಮಾತ್ರಕ್ಕೆ ಧರ್ಮಾತ್ಮರಾಗುವುದಿಲ್ಲ ಕೌರವ" ಎಂದೆನ್ನುವ ಕೃಷ್ಣನ ಮಾತು, "ದ್ವೇಷ ಸಾಧಿಸಿದರ್ಯಾರೂ ದೇಶ ಕಟ್ಟಿದ ನಿದರ್ಶನಗಳಿಲ್ಲ" ಎನ್ನುವ ಭೀಷ್ಮರ ಮಾತುಗಳೆಲ್ಲ ವರ್ತಮಾನದ ಮಾನವ ಬದುಕಿಗೆ ಎಚ್ಚರಿಕೆಯ ಘಂಟಾನಾದದ ಜೊತೆಗೆ ವಿವೇಕದ ರಾಜಮಾರ್ಗವನ್ನು ಕಣ್ಣೆದುರಿಗಿಡುತ್ತವೆ.

ಅವಕಾಶ ಸಿಕ್ಕಾಗಲೆಲ್ಲ ಲೇಖಕರು ಹಲವು ಪ್ರಶ್ನೆಗಳ ಗೊಂಚಲುಗಳನ್ನು ಓದುಗರ ತಲೆಯೊಳಗೆ ಸಹಜವಾಗಿ ಮತ್ತು ಎಚ್ಚರಿಕೆಯಿಂದ ತೂರಿಸಿ ಮುಂದಡಿ ಇಡುತ್ತಾರೆ. "ಜಗಕೆ ಬೆಳಕು ಕೊಡುವವನೆ ಮಗನನು ಕತ್ತಲೆಯೊಳು ಇರಿಸಿ ಹೋದನೆಂದರೆ??", "ಒಮ್ಮಿಂದೊಮ್ಮೆಗೆ ಕರುಣೆ ಕನಿಕರದ ಮಮತೆ ಉಕ್ಕಿ ಹರಿಯಿತೇ??", "ನದಿಯಲಿ ತೇಲಿ ಬಿಡುವೆವೆಂದು ಯೋಚಿಸಿಯೇ ಹುಟ್ಟಿಸಿದರೆ ದೇವ??", "ಹೌದಮ್ಮಾ! ಕೆಲವರದು ಹೆತ್ತರೆ ಋಣ ತೀರಿತು". "ದೊರೆತನಕೆ ಬರಗೆಟ್ಟು, ನೂಕಿದವಳ ನಂಬಿ, ನಂಬಿದವರ ನೂಕಿ ಬರಲೆ??" ಈ ಎಲ್ಲ ಮಾತುಗಳು ನಾಟಕದ ಪಾತ್ರಗಳಲ್ಲಿನ ಸಂಭಾಷಣೆಗಳು, ಪ್ರಶ್ನೆಗಳು ಎನ್ನುವುದಕ್ಕಿಂತ ಲೇಖಕರು ಲೋಕದ ಸಂತೆಗೆ ಎಸೆದ ಕವಣೆಯ ಕಲ್ಲುಗಳಾಗಿ ಕಾಣುತ್ತವೆ. ಪುರಾಣ, ಇತಿಹಾಸ ಹಾಗೂ ವರ್ತಮಾನಕ್ಕೆ ದೈತ್ಯ ಅಲೆಗಳಂತೆ ಅಪ್ಪಳಿಸುವ ಮೂಲಕ ಅಗತ್ಯವಿರುವವರಿಗೆಲ್ಲ ಮರ್ಮಾಘಾತ ಉಂಟುಮಾಡುತ್ತವೆ. ಮುಖ್ಯವಾಗಿ

“ಸಾಮರ್ಥ್ಯವನು ಅರಿತು ಅಧಿಕಾರ ನೀಡುವಂತಿದ್ದರೆ, ಇನ್ನೂ ಅದೆಂತಹ ಮಹಾನುಭಾವರನ್ನು ಈ ಭೂಮಂಡಲ ನೋಡುತ್ತಿತ್ತೋ?” ಎಂಬ ಪ್ರಶ್ನೆ ಬೆಂಬಿಡದೆ ಕಾಡುತ್ತಲೆ ಇರುವಷ್ಟು ಮೊನಚಾಗಿದೆ.

ಇಷ್ಟೆಲ್ಲ ಯಶಸ್ಸುಗಳ ನಡುವೆ ಅನೇಕ ಸನ್ನಿವೇಶಗಳಲ್ಲಿ ಹಲವು ಗೊಂದಲಗಳೂ, ಸಂದೇಹಗಳೂ ಜೊತೆಯಲ್ಲಿ ಹೆಜ್ಜೆ ಹಾಕುತ್ತವೆ. “ನಿಂಗೆಲ್ಲಿ ಬ್ಯಾಡಂದ್ರ ಬಿಡ್ತಿ, ನಿಂಗೂ ನಿಮ್ಮಪ್ಪನಂಗಾ ಉರಿಯೋ ಹಠಾ” ಎಂದು ರಾಧೆ ಮಗನಿಗೆ ಹೇಳುವ ಮಾತಿನಲ್ಲಿ ತಂದೆ ಅದಿರಥ ಕೋಪಿಷ್ಟನೆಂದು ಭಾವಿಸಬಹುದಾದರೂ ಈ ಕಥಾನಕದಲ್ಲಿ ಆತ ಸೌಮ್ಯವಾಗಿಯೇ ಎದುರಾಗಿದ್ದಾನೆ. ಸೂರ್ಯದೇವನೇ ಮಗುವಿನ ತಂದೆಯೆಂಬುದು ಗೊತ್ತಿಲ್ಲದ ರಾಧೆಯ ಬಾಯಿಂದ ಬರುವ ಮಾತು ಗೊಂದಲ ಮೂಡಿಸುತ್ತದೆ. ಭಾಷೆಯ ಕಡೆಗೊಂದಿಷ್ಟು ಗಮನ ಕೊಡುವುದಾದರೆ ಪರಶುರಾಮರ ಬಳಿಗೆ ಹೋದ ಬಾಲಕ ಬ್ರಾಹ್ಮಣನೆಂದು ಸುಳ್ಳು ಹೇಳಿ ಸಂಭಾಷಿಸುವ ಆತನ ಭಾಷೆ ಶಿಷ್ಟವಾಗಿ ಚಿತ್ರಿತಗೊಂಡಿದೆ. ಎಳೆಬಾಲನ ಬಾಯಿಂದ ವ್ಯಕ್ತವಾಗುವ ‘ಶಿಷ್ಟಭಾಷೆ’ ಹಾಗೂ ಅದೇ ತಾನೇ ಸ್ವಯಂವರದಿಂದ ಬಂದ ರಾಜಕುಮಾರಿ ಭಾನುಮತಿಯಿಂದ ಅಭಿವ್ಯಕ್ತಗೊಳ್ಳುವ ‘ಗ್ರಾಮ್ಯಸೊಗಡಿನ ಭಾಷೆ’ ತದ್ವಿರುದ್ಧವೆಂಬಂತೆ ಭಾಸವಾಗುತ್ತದೆ. ರಾಜನಲ್ಲದ ದುರ್ಯೋಧನ ಅಪರಿಚಿತನಾಗಿದ್ದ ಕರ್ಣನಿಗೆ ಅಂಗಾಧಿಪತಿಯನ್ನಾಗಿ ಮಾಡಿದನಲ್ಲದೆ ತಕ್ಷಣವೇ ಆತನನ್ನು ಜೀವದ ಗೆಳೆಯನೆಂದು ಸಂಬೋಧಿಸಿರುವುದು ಸಹಜತೆಗೆ ಧಕ್ಕೆ ತರುವಂತಿದೆ. ದೂತನಾಗಿ ಬಂದ ಪುರೋಹಿತನ ಮುಂದೆ ಆರ್ಭಟಿಸಿದ ಕರ್ಣನು ಮರುಕ್ಷಣವೇ ಕ್ಷಮೆ ಯಾಚಿಸುವ ನಾಟಕೀಯತೆ ಅಚ್ಚರಿ ಮೂಡಿಸುತ್ತದೆ; ಇದು ಆತನ ವ್ಯಕ್ತಿತ್ವವನ್ನು ಸಡಿಲಗೊಳಿಸಿದಂತೆ ಕಾಣುತ್ತದೆ. ಕೌರವನಿಗಾಗಿ ಕರ್ಣನು ದ್ರೌಪದಿಯ ಸ್ವಯಂವರದಲ್ಲಿ ಪಾಲ್ಗೊಳ್ಳುವಿಕೆಯು ವೀರನಾದ, ಛಲದಂಕಮಲ್ಲನಾದ ಕೌರವನ ವ್ಯಕ್ತಿತ್ವದ ತೇಜೋವಧೆ ಮಾಡಿದಂತೆನಿಸುತ್ತದೆ. ದ್ರೌಪದಿಯ ಸ್ವಯಂವರದ ಕೊನೆಯಲ್ಲಿ ಪ್ರಜೆಗಳೆಲ್ಲರಿಗೂ ಅವಕಾಶವಿದೆ ಎಂದರೂ ಸೂತಪುತ್ರರಿಗಿಲ್ಲ ಎಂದುಲಿಯುವ ದ್ರುಪದನ ಮಾತುಗಳು ಗೊಂದಲ ಮೂಡಿಸದೇ ಇರವು. ಸ್ವಯಂವರದ ಸ್ವಾಗತ ಸಮಾರಂಭವಂತೂ ಬೇಸರ ಮೂಡಿಸುವುದರ ಜೊತೆಗೆ ಇಂದಿನ ಸಭೆ-ಸಮಾರಂಭಗಳ ಗೋಜಲುಗಳಿಗೆ ಕನ್ನಡಿ ಹಿಡಿದಂತೆ ಕಾಣಿಸುತ್ತದೆ. ಅಜ್ಞಾತವಾಸದಲ್ಲಿದ್ದಾಗಲೇ ಪಾಂಡವರನ್ನು ಗುರುತಿಸಿದ್ದೇವೆ ಎನ್ನುವ ದುರ್ಯೋಧನನ ಮಾತುಗಳು ಹೆಚ್ಚು ಪುನರಾವರ್ತನೆಗೊಂಡು ಆತನ ಹಠವನ್ನು ಸಾಬೀತುಪಡಿಸಿದ್ದರೂ ಬೇಸರ ಮೂಡಿಸುತ್ತವೆ. ಇಷ್ಟೆಲ್ಲ ಸಂಶಯದ ಎಳೆಗಳ ಮಧ್ಯೆಯೂ ಇದೊಂದು ಚಿನ್ನದೆಳೆಯ ಶಾಮಿಯಾನ.

ಹಲವು ಬದಲಾವಣೆ, ಹೊಸತನ ಹಾಗೂ ಸಶಕ್ತ ಭಾಷಾಪ್ರೌಢಿಮೆಯೊಂದಿಗೆ ತೆರೆದುಕೊಳ್ಳುವ ಕೊನೆಯಿರದ ಬಾನು ನಿಜವಾಗಿಯೂ ಅಂತ್ಯವಿಲ್ಲದ ಹಾಡು. ಕೆಲವು

ಸಾಲುಗಳಂತೂ ಓದು ಮುಗಿದ ಮೇಲೂ ಓದುಗರೆದೆಯಲ್ಲಿ ಉಳಿದುಬಿಡುತ್ತವೆ. 'ನುಡಿಗಾದರೂ ಉಡಿ ಸಿಕ್ಕಿತಲ್ಲ' ಎಂದೆನ್ನುವ ಕರ್ಣ, 'ಬೂದಿಗಾಣದ ಒಲೆಗಳು ಆರಿ ತಿಂಗಳಾಗಿವೆ' ಎನ್ನುವ ವಾಸ್ತವದ ಅನಾವರಣ, "ರಣದೊಳು ಮರಳಿದರೆ ಒಮ್ಮೆಯಾದರೂ ಕೈತುತ್ತು ಉಣಿಸು, ಹೆಣವಾಗಿ ಉರುಳಿದರೆ, ಕಿಚ್ಚಿನೊಳು ದಹಿಸು" ಎನ್ನುವ ಮಗನ ಮಾತಂತೂ ಭಾವತಂತಿಯನ್ನೇ ಮೀಟಿ, ಓದುಗರೆದೆಯನ್ನು ಜುಮ್ಮೆನ್ನಿಸುತ್ತವೆ. ಇಂತಹ ಉಕ್ತಿಗಳೇ ಲೇಖಕರ ಶಕ್ತಿಯಂತೆ, ಆಕರ್ಷಣೆಯಂತೆ ಕಂಗೊಳಿಸುತ್ತದೆ. "ಕೊಟ್ಟರೆ ಕ್ಷಮೆ, ಕೊಡದಿದ್ದರೆ ವಿಮೆ" ಲೇಖಕರು ಕೊಟ್ಟ ಹೊಸ ಗಾದೆಯಂತಿದೆ. ಇಂತಹ ಹತ್ತು ಹಲವು ಪ್ರಯೋಗಗಳ ಸರಣಿಯೊಂದಿಗೆ ಸಾಗುತ್ತಲಿರುವ ನಾಟಕಕಾರ ಜಗದೀಶರವರು ಕನ್ನಡದ ಭವಿಷ್ಯತ್ತಿನ ಬೆಳಗಿಗೊಂದು ಭರವಸೆಯ ಬೆಳಕು.

ಪರಾಮರ್ಶನ ಗ್ರಂಥಗಳು:

1. ಜಗದೀಶ ಬ ಹಾದಿಮನಿ, (2023), ಕೊನೆಯಿರದ ಬಾನು, ಚೆನ್ನನೀಲಕಂಠ ಪ್ರಕಾಶನ, ಹುನಗುಂದ.
2. ಅನಂತ್ ಪೈ, (2009), ಕರ್ಣ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
3. ಲಕ್ಷ್ಮೀ ನಾರಾಯಣಸ್ವಾಮಿ ಎಚ್., (2018), ತೊಗಲಚೀಲದ ಕರ್ಣ, ಲಡಾಯಿ ಪ್ರಕಾಶನ, ಗದಗ.

Funding:

This study was not funded by any grant.

Conflict of interest:

The Authors have no conflict of interest to declare that they are relevant to the content of this article.

About the License:

© The Authors 2024. The text of this article is open access and licensed under a Creative Commons Attribution 4.0 International License.